ಜೇಲಿನಲ್ಲಿ ಅಸುನೀಗಿದವರು.

೧೯೪೨ ರ ಡಿಸೆಂಬರದಲ್ಲಿ ಹಿಂಡಲಗಿ ಜೇಲಿನಲ್ಲಿ ಪ್ರಾರಂಭವಾದ ಕಾಲರಾದಂಥ ಭಯಾನಕ ಬೇನೆಗೆ ಕೆಳಗಿನವರು ತುತ್ತಾದರು:—

(೧) ತಾಯಪ್ಪಾ ಹಿರೇಹಟ್ಟಿಹೊಳಿ (ತಾಲೂಕ ಖಾನಾಪೂರ).
(೨) ಶ್ರೀಮತಿ ಗಂಗೂಬಾಯಿ ಕಿನರೆ, ನಿಪ್ಪಾಣಿ.
(೩) ಪಾಮನರಾವ ಪೋತದಾರ, ಅಕ್ಕೋಳ.
(೪) ಜಿನಗೌಡಾ ಆಪಗೌಡಾ ಪಾಟೀಲ, ಬೆಡಕಿಹಾಳ.
(೫) ಸಿವ್ಯಾಮಯ್ಯಾ ಸ್ವಾಮಿ ಹಾಲದೇವರಮಠ, ಸಂಕೇಶ್ವರ.

ಇದೇ ಬೇನೆಯಿಂದ ಬಳಲಿ ಸುದೈವದಿಂದ ಬದುಕಿದವರು:—

(೧) ಕುಮಾರಿ ಅನುಸೂಯಾ ಸಾಮಂತ, ಬೆಳಗಾವಿ.
(೨) ,, ಗೋದಾವರಿ ಸೊಲ್ಲಾಪೂರಕರ, ಬೆಳಗಾವಿ.
(೩) ಸೌ. ಲಕ್ಷ್ಮೀಬಾಯಿ ಕುಲಕರ್ಣಿ, ಶಹಾಪೂರ–ಬೆಳಗಾವಿ.
(೪) ,, ಸೀತಾಬಾಯಿ ಪ್ರಭು (ಚಂದಗಡ)' ಹುಣಶಾನಟ್ಟಿ.

ಅನ್ಯ ಕಾರಣದಿಂದ ಜೇಲಿನಲ್ಲಿ ನಿಧನರಾದವರು;—

(೧) ಗೋಪಾಳ ಮಹಾದೇವ ಮಂಜಿರೆ (ಫ್ರೀ ಇಂಡಿಯಾ ಎಂಬ ಹೆಸರಿನಿಂದ ಪ್ರಸಿದ್ಧರಾದವರು) ಯರವಡಾ ಜೇಲಿನಲ್ಲಿ ೫ ವರ್ಷದ ಸಶ್ರಮ ಶಿಕ್ಷೆ ಭೋಗಿಸುತ್ತಿದ್ದಾಗ ವಿಷಮ ಜ್ವರದಿಂದ ತೀರಿಕೊಂಡರು.
(೨) ಅಲ್ಲಿಸಾಹೇಬ ಪಿಂಜಾರ, ಬುಡರಕಟ್ಟಿ, ಇವರು ಧನುರ್ವಾತದಿಂದ ಹಿಂಡಲಗಿ ಜೇಲಿನಲ್ಲಿ ಮೃತರಾದರು.
(೩) ಯಲ್ಲಪ್ಪಾ ಸನದಿ ಹೆದ್ದೂರ, ಇವರನ್ನು ಪೋಲೀಸರು ಹೆಣಬೀಳ ಹೊಡೆದು ಜೇಲಿಗೆ ಹಾಕಿದಾಗ ಜೇಲ ಆಸ್ಪತ್ರೆಯಲ್ಲಿ ನಿಧನರಾದರು.
(೪) ಬಸಲಿಂಗಪ್ಪಾ ನಿಂಗಪ್ಪಾ ಗುಡದವರ, ಸುಲಧಾಳ, ಇವರನ್ನು ಪೋಲೀಸರು ಬಡೆದು ಕೊಂದು ಅವರ ಶವವನ್ನು ಗಿಡಕ್ಕೆ ನೇತು ಹಾಕಿದರು.

———